ಕಮಲಾಪುರ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ವಸತಿ ನಿಲಯಗಳ ಬಗ್ಗೆ

4194 (4588) : ಶ್ರೀ ಗೌನಾಯಕ್ ಬೆಳಮಗಿ (ಕಮಲಾಪೂರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಕಮಲಾಪುರ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ಒಟ್ಟು ವಸತಿ ನಿಲಯಗಳೆಷ್ಟು; ಅವು ಯಾವುವು?

ಆ) ಹೊಸದಾಗಿ ವಸತಿ ನಿಲಯಗಳು ಮಂಜೂರಾಗಿವೆಯೇ; ಹಾಗಿದ್ದಲ್ಲಿ, ಬಾಲಕ ಮತ್ತು ಬಾಲಕಿಯರ ವಸತಿ ನಿಲಯಗಳೆಷ್ಟು; (ವಿವರ ನೀಡುವುದು)

ಇ) ಈ ಭಾಗದ ಬೇಡಿಕೆಗನುಗುಣವಾಗಿ ಇನ್ನೂ ಹೆಚ್ಚಿನ ವಸತಿ ನಿಲಯಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆ – ಒಟ್ಟು 7 ವಸತಿನಿಲಯಗಳು

1. ಸರ್ಕಾರಿ ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು

1. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕಮಲಾಪುರ, ಗುಲ್ಬರ್ಗಾ ತಾ:
2. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಔರಾದ್, ಗುಲ್ಬರ್ಗಾ ತಾ:
3. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮಹಾಗಾಂವ್ ಗುಲ್ಬರ್ಗಾ ತಾ:
4. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕಮಲಾಪುರ, ಆಳಂದ ತಾ:
5. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೆಳಮಗಿ, ಆಳಂದ ತಾ:
6. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಚಿಂಚನಸೂರ್, ಆಳಂದ ತಾ:

2. ಸರ್ಕಾರಿ ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯಗಳು

1. ಸರ್ಕಾರಿ ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯ, ಕಮಲಾಪುರ, ಗುಲ್ಬರ್ಗಾ ತಾ:

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ – ಇಲ್ಲ

ಹಿಂದುಳಿದ ವರ್ಗಗಳ ಇಲಾಖೆ – ಒಟ್ಟು 6 ವಸತಿನಿಲಯಗಳು

1. ಸರ್ಕಾರಿ ಮೆಟ್ರಿಕ್ –ನಂತರದ ಬಾಲಕಿಯರ ವಸತಿನಿಲಯ, ಕಮಲಾಪುರ ತಾ: ಗುಲ್ಬರ್ಗಾ ಜಿಲ್ಲೆ
2. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕಿಯರ ವಸತಿನಿಲಯ, ಡೊಂಗರಗಾಂವ್ ತಾ: ಗುಲ್ಬರ್ಗಾ ಜಿಲ್ಲೆ

3. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಸೋಂತ ತಾ: ಗುಲ್ಬರ್ಗಾ ಜಿಲ್ಲೆ
4. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಮಹಾಂಗಾವ್ ತಾ: ಗುಲ್ಬರ್ಗಾ ಜಿಲ್ಲೆ
5. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಎ.ಕೆ. ಸಲಗರ, ಆಳಂದ ಗುಲ್ಬರ್ಗಾ ಜಿಲ್ಲೆ
6. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಅಂಬಲಗಾ, ಆಳಂದ ತಾ: ಗುಲ್ಬರ್ಗಾ ಜಿಲ್ಲೆ

ಸಮಾಜ ಕಲ್ಯಾಣ ಇಲಾಖೆ

ಹೌದು, ಆಳಂದ ತಾ: ಖಜಜಾರಿ ಮತ್ತು ನರೋಣಿ ಎಂಬಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಜಿಲ್ಲೆಯಿಂದ ಪ್ರಸ್ತಾವನೆ ಬಂದಿದ್ದು, ಪರಿಶೀಲನೆಯಲ್ಲಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ – ಇಲ್ಲ
ಹಿಂದುಳಿದ ವರ್ಗಗಳ ಇಲಾಖೆ – ಇಲ್ಲ

ಇ) ಸಮಾಜ ಕಲ್ಯಾಣ ಇಲಾಖೆ ಪ್ರಸ್ತಾವನೆಗಳು ಬಂದಲ್ಲಿ
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿಯಮಾನುಸಾರ
ಹಿಂದುಳಿದ ವರ್ಗಗಳ ಇಲಾಖೆ ಪರಿಶೀಲಿಸಲಾಗುವುದು

ರಾಜ್ಯದಲ್ಲಿ ಶಾಶ್ವತ ಹಿಂದುಳಿದ ವರ್ಗದ ಆಯೋಗದ ಮೀಸಲಾತಿ

4195 (4916) : ಶ್ರೀ ರೇವೂನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಶಾಶ್ವತ ಹಿಂದುಳಿದ ವರ್ಗದ ಆಯೋಗ ಸ್ಥಾಪಿಸುವ ಮೊದಲು ಇದ್ದಂತಹ ಮೀಸಲಾತಿ ನೀತಿ ಏನು; ಯಾವ ಆಧಾರದಲ್ಲಿ ಈ ಸೌಲಭ್ಯ ನೀಡಲಾಗುತ್ತಿತ್ತು; (ವಿವರ ಒದಗಿಸುವುದು)

ಆ) ಈಗಿನ ಮೀಸಲಾತಿ ಅನುಸಾರ ಉದ್ಯೋಗಕ್ಕೆ ಹಾಗೂ ವ್ಯಾಸಂಗಕ್ಕೆ ಅನುಸರಿಸುವ ಮಾನದಂಡಗಳೇನು;

ಇ) ಆದಾಯ ಮಿತಿಯನ್ನು ಎಷ್ಟಕ್ಕೆ ನಿಗದಿಪಡಿಸಿಲಾಗಿದೆ; (ಪ್ರವರ್ಗಗಳವಾರು ವಿವರ ನೀಡುವುದು)

ಈ) ಹಿಂದುಳಿದವರಲ್ಲಿ ಆರ್ಥಿಕವಾಗಿ ದುರ್ಬಲರಾದವರಿಗೆ ವಿಶೇಷ ಮೀಸಲಾತಿ ಸೌಲಭ್ಯ ಕಲ್ಪಿಸಲು ಸರ್ಕಾರ ಆಲೋಚಿಸುವುದೇ;

ಉ) ಅಂತಹ ಜಾತಿಗಳ ವಿವರ ನೀಡುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನು ರಚಿಸಲು ಮೊದಲು ರಾಜ್ಯದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಕೆಳಕಂಡಂತೆ ಇರುತ್ತದೆ.

1. ಜಸ್ಟೀಸ್ ಲೆಸ್ಲಿ ಮಿಲ್ಲರ್ ಸಮಿತಿ (1918)

ಶೇಕಡಾ 75 ಮೀಸಲಾತಿಯನ್ನು ಶಿಫಾರಸ್ಸು ಮಾಡಿದ್ದು 1921ರಲ್ಲಿ ಆದೇಶ ಹೊರಡಿಸಲಾಗಿದೆ.